ಶಿಕ್ಷಣದ ಹಕ್ಕು

ಸರ್ವ ಶಿಕ್ಷಣ ಅಭಿಯಾನ

ಎಲ್ಲರೂ ಕಲಿಯೋಣ - ಎಲ್ಲರೂ ಬೆಳೆಯೋಣ

ರಾಜ್ಯ ಯೋಜನಾ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ ಪೂರಕ ಕಟ್ಟಡ, ನೃಪತುಂಗ ರಸ್ತೆ, ಬೆಂಗಳೂರು-01.

***

ಸಂಖ್ಯೆ: ಸಶಿಅ/ತರಬೇತಿ/ಮಿ.ಅ.ಗ್ರಾ.ಸಭೆ/10/2017-18 ದಿನಾಂಕ: 12.09.2017

## ಸುತ್ತೋಲೆ

ವಿಷಯ: ರಾಷ್ಟ್ರೀಯ ದಿನಾಚರಣೆಗಳಲ್ಲಿ "ಪ್ರಭಾತ್ ಫೇರೆ" (ಜಾಥಗಳು) ಮತ್ತು ವಿಶೇಷ ಚಟುವಟಿಕೆಗಳನ್ನು ಶಾಲೆಯಲ್ಲಿ ಆಯೋಜಿಸುವ ಸಂಬಂಧ.

ಉಲ್ಲೇಖ: 1. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಪತ್ರ ಸಂಖ್ಯೆ:ಇಡಿ09ಯೋಸಕ2017, ದಿನಾಂಕ:19.08.2017.

2. MHRD ರವರ ಪತ್ರ ಸಂಖ್ಯೆ: F.No.16-1/2017-EE.8, Dated on 03.07.2017.

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ(1)ರನ್ವಯ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳರವರು ಎಂ.ಹೆಚ್.ಆರ್.ಡಿ ರವರ ಪತ್ರದ ಕುರಿತು ಕ್ರಮವಹಿಸಲು ಸೂಚಿಸಿರುತ್ತಾರೆ. ಸದರಿ ಎಂ.ಹೆಚ್.ಆರ್.ಡಿ ರವರ ಉಲ್ಲೇಖ ಪತ್ರ(2) ರನ್ವಯ ದಿನಾಂಕ:16.03.2017 ರಂದು ಮಾನ್ಯ ಪ್ರಧಾನ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ "ಮಿಷನ್ ಅಂತ್ಯೋದಯ" ಸಭೆಯಲ್ಲಿ ನಡೆದ ಚರ್ಚೆ ಅನ್ವಯ ಮತ್ತು ಸದರಿ ಸಭೆಯ ಸಭಾ ನಡಾವಳಿ ಪ್ರಕಾರ ಗ್ರಾಮಗಳಲ್ಲಿ ನಡೆಯುವ ಗ್ರಾಮ ಪಂಚಾಯಿತಿ ಸಭೆಗಳಲ್ಲಿ ಗ್ರಾಮಸ್ಥರು ಅತಿ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸುವುದು ಕಂಡುಬಂದಿದೆ ಎಂದು ಮಾನ್ಯ ಪ್ರಧಾನ ಮಂತ್ರಿಗಳು ಅಭಿಪ್ರಾಯಪಟ್ಟಿರುತ್ತಾರೆ. ಈ ಹಿನ್ನಲೆಯಲ್ಲಿ ಗ್ರಾಮ ಸಭೆಗಳ ಮಹತ್ವ ಕುರಿತು ಗ್ರಾಮಸ್ಥರಲ್ಲಿ ಅರಿವು ಮೂಡಿಸಲು ಶಾಲೆಯ ಮಕ್ಕಳಿಂದ ಪ್ರಭಾತ್ ಫೇರೆ ಮತ್ತು ಇತರೆ ಸೂಕ್ತ ಚಟುವಟಿಕೆಗಳನ್ನು ಆಯೋಜಿಸಬೇಕೆಂದು ಸೂಚಿಸಿರುತ್ತಾರೆ. ಹೀಗೆ ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಪ್ರಜಾಪ್ರಭುತ್ವ ಸಂಸ್ಥೆಗಳ ಆಡಳಿತದ ಬೇರಿನ ಮಟ್ಟದ ಅರಿವು ಮೂಡುತ್ತದೆ. ವಿವಿಧ ಅಭಿಪ್ರಾಯಗಳೊಡನೆ ಮಾನ್ಯ ಪ್ರಧಾನ ಮಂತ್ರಿಗಳು ಗ್ರಾಮ ಸಭಾ ಆಯೋಜನೆಯ ದಿನದಂದು ಮಕ್ಕಳು "ಪ್ರಭಾತ್ ಫೇರೆ" ಜಾಥಗಳ ಮೂಲಕ ಸ್ಥಳೀಯ ಪ್ರಜಾಪ್ರಭುತ್ವದ ಮಹತ್ವ ಮತ್ತು ಸರ್ಕಾರಿ ಸಂಸ್ಥೆಗಳಲ್ಲಿ ಗ್ರಾಮಸ್ಥರ ಭಾಗವಹಿಸುವಿಕೆ ಕುರಿತು ಚಟುವಟಿಕೆಗಳ ಮೂಲಕ ಮಹತ್ವ ಸಾರಲು ಸೂಚಿಸಿರುತ್ತಾರೆ.

ಪ್ರಸಕ್ತ ವರ್ಷದಲ್ಲಿ ಗ್ರಾಮಾಭಿವೃದ್ಧಿ ಮಂತ್ರಾಲಯವು "ಮಿಷನ್ ಅಂತ್ಯೋದಯ" ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಿದ್ದು, ಇದರ ಉದ್ದೇಶ ಗ್ರಾಮ ಪಂಚಾಯಿತಿ ಮತ್ತು ಗ್ರಾಮಾಂತರ ಸಮೂಹಗಳನ್ನು ಬಡತನಮುಕ್ತ ಮಾಡುವುದು ಆಗಿರುತ್ತದೆ. ವಿವಿಧ ಗ್ರಾಮಪಂಚಾಯಿತಿಗಳು ಬೇರೆ ಬೇರೆ ದಿನಾಂಕಗಳಂದು ಗ್ರಾಮಸಭೆಗಳು ಆಯೋಜನೆಗೊಳ್ಳುತ್ತವೆ. ಆದರೆ ನಮ್ಮ ದೇಶದಲ್ಲಿ ಮಹಾತ್ಮ ಗಾಂಧೀಜಿರವರ ಜನ್ಮದಿನಾಚರಣೆಯಾದ ದಿನಾಂಕ:02.10.2017 ರಂದು ಗ್ರಾಮಸಭೆಗಳನ್ನು ಆಯೋಜಿಸುವುದು ವಾಡಿಕೆಯಾಗಿರುತ್ತದೆ. ಆದುದರಿಂದ ಗ್ರಾಮೀಣಾಭಿವೃದ್ಧಿ ಮಂತ್ರಾಲಯವು ಎಂ.ಹೆಚ್.ಆರ್.ಡಿರವರು ಸ್ಥಳೀಯ ಪ್ರಜಾಪ್ರಭುತ್ವ ಮತ್ತು ಸರ್ಕಾರಿ ಸಂಸ್ಥೆಗಳ ಕಾರ್ಯಚರಣೆ ಕುರಿತು ಮಹತ್ವ ಸಾರುವ ವಿಷಯವನ್ನು ಆಧರಿಸಿ ಪ್ರಮುಖ ಉಪಕ್ರಮವನ್ನು ಸದರಿ ದಿನದಂದು ತೆಗೆದುಕೊಳ್ಳಬೇಕೆಂದು ಸೂಚಿಸಿದೆ.

ಆದುದರಿಂದ ಗ್ರಾಮಸಭೆಗಳ ಪ್ರಾಮುಖ್ಯತೆ ಕುರಿತು ಗ್ರಾಮಗಳಲ್ಲಿ ಜಾಗೃತಿ ಮೂಡಿಸಲು ಎಲ್ಲಾ ರಾಜ್ಯಗಳ ಶಾಲೆಗಳಲ್ಲಿ ವಿದ್ಯಾರ್ಥಿಗಳಿಂದ "ಪ್ರಭಾತ್ ಫೇರೆ" ಮತ್ತು ರಾಷ್ಟ್ರೀಯ ದಿನಾಚರಣೆಯ ಸಂದರ್ಭದಲ್ಲಿ ಸ್ಥಳೀಯ

ಪ್ರಜಾಪ್ರಭುತ್ವ ಮತ್ತು ಸ್ಥಳೀಯ ಸರ್ಕಾರಿ ಸಂಸ್ಥೆಗಳ ಕರ್ತವ್ಯ ಜವಾಬ್ದಾರಿಗಳ ಕುರಿತು ಮಹತ್ವ ಸಾರುವ ಚಟುವಟಿಕೆಗಳ ಆಯೋಜನೆ ನಡೆಸಲು ಸೂಚಿಸಲಾಗಿದೆ.

ಈ ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಮಹಾತ್ಮ ಗಾಂಧೀಜಿರವರ ಜನ್ಮದಿನಾಚರಣೆಯಾದ ದಿನಾಂಕ:02.10.2017 ರಂದು ಶಾಲಾ ವಿದ್ಯಾರ್ಥಿಗಳಿಂದ "ಪ್ರಭಾತ್ ಫೇರೆ" ಆಯೋಜನೆ ಮತ್ತು ರಾಷ್ಟ್ರೀಯ ದಿನಾಚರಣೆಯ ಸಂದರ್ಭದಲ್ಲಿ ಸ್ಥಳೀಯ ಪ್ರಜಾಪ್ರಭುತ್ವ ಮತ್ತು ಸರ್ಕಾರಿ ಸಂಸ್ಥೆಗಳ ಕಾರ್ಯಗಳ ಕುರಿತು ಮಹತ್ವ ಸಾರುವ ಚಟುವಟಿಕೆಗಳಾದ ಘೋಷಣೆಗಳು, ನಾಟಕ, ಚರ್ಚೆ, ಏಕಪಾತ್ರಾಭಿನಯ, ಭಾಷಣ, ಗೀತೆಗಳು ಇತ್ಯಾದಿ ಚಟುವಟಿಕೆಗಳನ್ನು ಸ್ಥಳೀಯ ಸಂಸ್ಥೆಗಳ ಸಹಯೋಗದೊಂದಿಗೆ ಕಾರ್ಯಕ್ರಮಗಳನ್ನು ಕಡ್ಡಾಯವಾಗಿ ಆಯೋಜಿಸಲು ಸೂಚಿಸಿದೆ. ಈ ಸಂಬಂಧ ಅಗತ್ಯ ದಾಖಲೀಕರಣವನ್ನು "School Album" ಮಾಡಿ ಸಂಗ್ರಹಿಸಬೇಕೆಂದು ಸೂಚಿಸಿದೆ.

ನಿರ್ದೇಶಕರು(ಕಾ)
ಸರ್ವ ಶಿಕ್ಷಣ ಅಭಿಯಾನ
ಬೆಂಗಳೂರು

**ಅಗತ್ಯ ಕ್ರಮಕ್ಕಾಗಿ:**
ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು(ಆಡಳಿತ),ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮೂಲಕ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಮುಂದಿನ ಕ್ರಮಕ್ಕಾಗಿ ರವಾನಿಸಲು.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ:**

1. ಮಾನ್ಯ ಸರ್ಕಾರದ ಉಪಕಾರ್ಯದರ್ಶಿ(ಯೋಜನೆ) ಮತ್ತು ಆಂತರಿಕ ಆರ್ಥಿಕ ಸಲಹೆಗಾರರು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲ್ಬುರ್ಗಿ ಜಿಲ್ಲೆ.
4. ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರು, ಸಾರ್ವಜನಿಕ ಶಿಕ್ಷಣ ಇಲಾಖೆ.